ಉದಯವಾಣಿ

ಕನ್ನಡ ದಿನಪತ್ರಿಕೆ

ಜನ್ಮಶತಮಾನೋತ್ಸವ

# ಕೆಎಸ್‌ನ ಪದ್ಯ ಓದಿದರೆ ಹುಮ್ಮಸ್ಸು

## ■ ಶತಮಾನ ಕಳೆದರೂ ಸಾಹಿತ್ಯ ಲೋಕದಲ್ಲಿ ನರಸಿಂಹಸ್ವಾಮಿ ಮರೆಯಾಗಲ್ಲ: ಕಂಬಾರ

ಬೆಂಗಳೂರು: 'ಪ್ರೇಮಕವಿ' ಕೆ.ಎಸ್. ನರಸಿಂಹಸ್ವಾಮಿ ಅವರು ಅಪ್ಪಟ ದೇಸಿ ಕವಿಯಾಗಿದ್ದು, ಶತಮಾನ ಉರುಳಿದರೂ ಕನ್ನಡ ಭಾಷೆ ಹಾಗೂ ಸಾಹಿತ್ಯ ಪರಂಪರೆಯಲ್ಲಿ ಜೀವಂತವಾಗಿರುತ್ತಾರೆ ಎಂದು ನಾಡೋಜ ಕಮಲಾ ಹಂಪನಾ ಶ್ಲಾಘಿಸಿದ್ದಾರೆ.

ಸಾಹಿತ್ಯ ಅಕಾಡೆಮಿ ಮತ್ತು ಜೈನ್ ವಿಶ್ವವಿದ್ಯಾಲಯ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಕೆ.ಎಸ್. ನರಸಿಂಹಸ್ವಾಮಿ ಜನ್ಮಶತಮಾನೋತ್ಸವ' ಕುರಿತ ವಿಚಾರ ಸಂಕಿರಣದಲ್ಲಿ ಅವರು ಪಾಲ್ಗೊಂಡಿದ್ದರು.

ಚಿಕ್ಕವಯಸ್ಸಿನಲ್ಲಿ ನರಸಿಂಹಸ್ವಾಮಿ ಅವರ 'ಮೈಸೂರು ಮಲ್ಲಿಗೆ' ಕವನ ಸಂಕಲನದ ಹಾಡುಗಳನ್ನು ಹಾಡುತ್ತಿದೆ. ವಿದ್ಯಾರ್ಥಿ ದೆಸೆಯಲ್ಲಿ ಅವರ ಪ್ರೇಮ ಕಾವ್ಯಗಳನ್ನು ಓದುತ್ತಿದ್ದೆ. ಕಾಲೇಜು ತರಗತಿಗಳಲ್ಲಿ ಪ್ರಾಧ್ಯಾಪಕರು ನರಸಿಂಹಸ್ವಾಮಿಯವರ ಕವನ ಸಂಕಲದ ಬಗ್ಗೆ ಹೇಳುತ್ತಿದ್ದರು. ಹೀಗಾಗಿ ಮುಂದೆ ಸಾಹಿತ್ಯ ರಚನೆ ಮಾಡುವಾಗ ಕೆಎಸ್ಎನ್ ಅವರನ್ನು ನಾನು ಸ್ಫೂರ್ತಿಯಾಗಿ ತೆಗೆದುಕೊಂಡಿದ್ದೆ. ಹೀಗೆ ಜೀವನದ ಪ್ರತಿ ಹಂತದಲ್ಲೂ ಅವರು ನನ್ನ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದರು ಎಂದು ಸ್ಮರಿಸಿದರು.

ಕೆ.ಎಸ್. ನರಸಿಂಹಸ್ವಾಮಿ ಅಪ್ಪಟ ದೇಸಿ ಕವಿ. ಈ ನೆಲದ ಸಂಸ್ಕೃತಿ, ಮಣ್ಣಿನ ಸೊಗಡು ಹಾಗೂ ಜಾನಪದ ಸತ್ವವನ್ನು ತಮ್ಮ ಕಾವ್ಯದಲ್ಲಿ ಕಾಣಿಸುತ್ತಿದ್ದರು. ಅವರದು 'ಪ್ರೇಮ ಕಾವ್ಯ' ಎಂದು ಭಾವಿಸುವುದರ ಬದಲಾಗಿ ದಾಂಪತ್ಯ ಗೀತೆ ಎನ್ನುವುದು ಸೂಕ್ತ. 'ನಾನು ದಾಂಪತ್ಯ ಗೀತೆಗಳ ಕವಿ' ಎಂದು ಅವರೇ ಹೇಳಿಕೊಂಡಿದ್ದರು. ದಾಂಪತ್ಯ ಜೀವನದ ರಸಾನುಭವ, ಪ್ರೀತಿ, ಪ್ರಯಣದ ಬಗ್ಗೆ ಅಶ್ಲೀಲತೆಗೆ ಅವಕಾಶ ಕೊಡದೆ ಸರಳ ಹಾಗೂ ಮಧುರ ಭಾಷೆಯಲ್ಲಿ ಜನಸಾಮಾನ್ಯರಿಗೆ ನಾಟುವಂತೆ ಬರೆದರು. ಗುಮಾಸ್ತರಾಗಿದ್ದ ಅವರು ಸಂಸಾರದ ಅನೇಕ ಕಷ್ಟಗಳನ್ನು ಎದುರಿಸಿದರೂ, ಅವುಗಳನ್ನು ಕವಿತೆಗಳಿಗೆ ತರಲಿಲ್ಲ ಎಂದರು.



ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಕೆ.ಎಸ್. ನರಸಿಂಹಸ್ವಾಮಿ ಜನ್ಮಶತಮಾನೋತ್ಸವ' ಕುರಿತ ವಿಚಾರ ಸಂಕಿರಣದಲ್ಲಿ ಚಂದ್ರಶೇಖರ ಕಂಬಾರ, ಕಮಲಾ ಹಂಪನಾ, ನರಹಳ್ಳಿ ಬಾಲಸುಬ್ರಹ್ಮಣ್ಯ ಇತರರು ಪಾಲ್ಗೊಂಡಿದ್ದರು.

■ ಮರೆಯಾಗಲ್ಲ: ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ, 'ಕಾವ್ಯ' ಪರಂಪರೆಯ ದಿಗ್ಗಜರಾದ ಗೋಪಾಲಕೃಷ್ಣ ಅಡಿಗ ಮತ್ತು ಕೆ.ಎಸ್. ನರಸಿಂಹಸ್ವಾಮಿ ಅವರೊಂದಿಗೆ ನನಗೆ ಹಲವು ವರ್ಷಗಳ ಒಡನಾಟವಿತ್ತು. ನರಸಿಂಹಸ್ವಾಮಿ ಪದ್ಯ ಓದಿದರೆ ಮನಸ್ಸಿಗೆ ಹುಮ್ಮಸ್ಸು ಬರುತ್ತದೆ. ಬೌದ್ಧಿಕ ಮಾಹಿತಿಯ ಬದಲಾಗಿ ಮಾನವ ಪ್ರೀತಿ ಹಾಗೂ ವಾತ್ಸಲ್ಯ ಅವರ ಕಾವ್ಯದಲ್ಲಿ ಕಾಣುತ್ತವೆ. ಮಧ್ಯಮ ವರ್ಗದ ಕಷ್ಟ-ನೋವು, ನಲಿವನ್ನು ಕಾವ್ಯಗಳ ಮೂಲಕ ವಿವರಿಸಿದ್ದರು. ಕನ್ನಡ ಭಾಷೆ, ಸಂಸ್ಕೃತಿ ನೆಲೆಯಲ್ಲಿ ಕವಿತೆಗಳನ್ನು ಬರೆದ ಕೆಎಸ್‌ನ ಎಷ್ಟೇ ಶತಮಾನ ಕಳೆದರೂ ಸಾಹಿತ್ಯ ಲೋಕದಲ್ಲಿ ಮರೆಯಾಗುವುದಿಲ್ಲ ಎಂದು ಬಣ್ಣಿಸಿದರು.

■ ಕುಮಾರವ್ಯಾಸ ಬಿಟ್ಟರೆ ಕೆಎಸ್‌ನ: ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಕನ್ನಡ ಕಾವ್ಯ ಪರಂಪರೆಗೆ ಕೆಎಸ್‌ನ ಮತ್ತು ಗೋಪಾಲಕೃಷ್ಣ ಅಡಿಗರದು ಎರಡು ಮಾದರಿಗಳವೆ. ಕಾವ್ಯದಲ್ಲಿ ಚರಿತ್ರೆ ಕಟ್ಟಿಕೊಡಲು ಸಾಧ್ಯವಿಲ್ಲ. ಆದರೆ, ಕೆಎಸ್‌ನ ಕಾವ್ಯದಲ್ಲಿ ಮಧ್ಯಮ ವರ್ಗದ ಜನರ ದಿನಿತ್ಯದ ಬದುಕಿನ ಚರಿತ್ರೆ ಹೇಳಿದ ಕವಿ ಎಂದರು.

ಅಶ್ಲೀಲತೆ ಕಾಣಿಸಿಕೊಳ್ಳದಂತೆ ಶೃಂಗಾರವನ್ನು ಕಾವ್ಯದಲ್ಲಿ ನಿರ್ವಹಿಸುವುದು ಕವಿಗೆ ಸವಾಲಿನ ಕೆಲಸ. ಈ ಸವಾಲನ್ನು ಕೆಎಸ್‌ನ ಯಶಸ್ವಿಯಾಗಿ ನಿಭಾಯಿಸಿದರು. ಅಲ್ಲದೆ, 20ನೇ ಶತಮಾನದಲ್ಲಿ ನವ್ಯ, ನವೋದಯ, ದಲಿತ ಮತ್ತು ಪ್ರಗತಿಶೀಲ ಸಾಹಿತ್ಯಕ್ಕೆ ಸೃಜನಶೀಲತೆ ನೀಡಿದ ಕೆಎಸ್‌ನ, ಕುಮಾರವ್ಯಾಸ ನಂತರ ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಹೆಚ್ಚಿನ ಜನಪ್ರೀತಿ ಮತ್ತು ವಿಮರ್ಶೆಯ ಮನ್ನಣೆ ಪಡೆದ ಏಕೈಕ ಕವಿ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಕೆ. ಶ್ರೀನಿವಾಸರಾವ್, ಕನ್ನಡ ವಿಭಾಗದ ಮುಖ್ಯಸ್ಥ ಮಂಜುನಾಥ ಮತ್ತು ಜೈನ್ ಕಾಲೇಜು ಪ್ರಾಂಶುಪಾಲರಾದ ಶಾಂತಿ ಅಯ್ಯರ್, ಕೆ.ಎಸ್. ನರಸಿಂಹಸ್ವಾಮಿ ಅವರ ಪುತ್ರ ಹರಿಹರ, ಪುತ್ರಿ ತುಂಗಭದ್ರಾ ಮತ್ತು ಮೊಮ್ಮಗಳು ಮೇಖಲಾ ಉಪಸ್ಥಿತರಿದ್ದರು.